# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ

## ದಾವೀದನು ಕುರಿ ಕಾಯುವ ಹುಡುಗನಾಗಿದ್ದನು



ಬರಹಗಾರರು: Edward Hughes

ಚಿತ್ರಲೇಖಕರು: Lazarus

ಅಳವಡಿಸುವವರು: Ruth Klassen

ಪದ್ಮಾ ಸೈಲೇಸ್: Vinay Shirol

ತಯಾರಕರು: Bible for Children
www.M1914.org

©2015 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಇಸ್ರೆಯೇಲಿನ ರಾಜನಾದ ಸೌಲನ ಆಡಳಿತದ ಸಮಯದಲ್ಲಿ, ದಾವೀದ ಎಂಬ ಹೆಸರುಳ್ಳ ಒಬ್ಬ ಹುಡುಗನಿದ್ದನು, ...



... ಅವನು ಯೌವನಸ್ಥನು ಮತ್ತು ಬಹಳ ಧೈರ್ಯವುಳ್ಳವನು ಹಾಗೂ ದೇವರ ಮೇಲೆ ಬರವಸೆವುಳ್ಳ ಹುಡುಗನಾಗಿದ್ದನು.



ಅವನು ತನ್ನ ಏಳು ಜನ ಅಣ್ಣಂದಿರಿಗೆ ಕುರಿ ಕಾಯುವುದರಲ್ಲಿ ಸಹಾಯಕನಾಗಿದ್ದನು. ಅವನು ಬೆತ್ಲಹೇಮ್ ಎಂಬ ಪಟ್ಟಣದಲ್ಲಿ ಜೀವಿಸುತ್ತಿದ್ದನು.



ಆತನು ಕುರಿ ಕಾಯುವ
ಸಮಯದಲ್ಲಿ ಒಂದು ಸಿಂಹವು
ಬಂದು ಒಂದು ಕುರಿಯನ್ನು
ಹಿಡಿಯಲಾರಂಭಿಸಿತು.



ಅದನ್ನು ಕಂಡ ದಾವೀದನು ಆ ಸಿಂಹದ
ಗಡ್ಡವನ್ನು ಹಿಡಿದು ಅದನ್ನು ಕೊಂದು
ಆದರ ಬಾಯಿಂದ ಆ ಕುರಿಯನ್ನು
ಕಾಪಾಡಿದನು, ದೇವರು
ಸಹಾಯ ಮಾಡುತ್ತಾನೆಂದು
ಆತನಿಗೆ ತಿಳಿದಿತ್ತು.



ದೇವರ ಪ್ರವಾದಿಯಾದ ಸಮುವೇಲನು, ರಾಜನಾದ ಸೌಲನು ದೇವರನ್ನು ಬಹಳವಾಗಿ ಬೇಸರಪಡಿಸಿರುವುದನ್ನು ತಿಳಿದು ಬಹಳ ದುಃಖವುಳ್ಳವನಾಗಿದ್ದನು. ದೇವರು ಸಮುವೇಲನಿಗೆ ನೀನು ಸೌಲನಿಗಾಗಿ ಎಲ್ಲಿಯ ವರೆಗೆ ಗೋಳಾಡುತ್ತೀಯ, ...



... ನಾನು ನಿನ್ನನ್ನು ಇಷಯನ ಬಳಿಗೆ ಕಳುಹಿಸುತ್ತೇನೆ. ನಾನು ಅವನ ಮಕ್ಕಳಲ್ಲೊಬ್ಬನನ್ನು ಅರಸನನ್ನಾಗಿ ಆರಿಸಿಕೊಂಡಿದ್ದೇನೆ. ಈ ಇಷಯನು ದಾವೀದನ ತಂದೆ.



ಇನ್ನೊಬ್ಬ ರಾಜನನ್ನು
ಆರಿಸಿಕೊಳ್ಳವುದಾದರೆ ರಾಜನಾದ
ಸೌಲನು ಅವನನ್ನು ಕೊಲ್ಲುವನೆಂದು
ಸಮುವೇಲನು ತಿಳಿದಿದ್ದರೂ,
ದೇವರಿಗೆ ವಿಧೇಯನಾದನು.





ಸಮುವೇಲನು ಇಷಯನ
ಮನೆಗೆ ಹೋದಾಗ
ಇಷಯನು ತನ್ನ ಮಕ್ಕಳನ್ನು
ಸಮುವೇಲನ ಮುಂದೆ
ತಂದನು, ಅದರೆ ಅವರಲ್ಲಿ
ಯಾರನ್ನು ದೇವರು
ಆರಿಸಲು ಸೂಚಿಸಲಿಲ್ಲ.



ಆದರೆ ಎಲ್ಲಾರಿಗಿಂತ
ಚಿಕ್ಕವನಾದ ದಾವೀದನನ್ನು
ಕುರಿಗಳನ್ನು ಕಾಯುವುದಕ್ಕೆ
ಇಷಯನು ಬಿಟ್ಟಿದ್ದನು.
ದಾವೀದನನ್ನು ಕರೆಯಲ್ಪಟ್ಟಾಗ,
ದೇವರು ಸಮುವೇಲನಿಗೆ ‘ಈಗ
ನೀನು ಎದ್ದು ಹೋಗಿ ಆತನನ್ನು
ಅಭಿಷೇಸು ಆತನನ್ನೇ ನಾನು
ಆರಿಸಿಕೊಂಡಿದ್ದೇನೆ’ ಅಂದನು.



ದೇವರಾತ್ಮನು
ಅರಮನೆಯಲ್ಲಿದ್ದ
ಸೌಲನನ್ನು ಬಿಟ್ಟು
ಹೋದ ನಂತರ ಆತನು
ಬಹಳ ಪೇಚಾಟಕ್ಕೆ
ಒಳಗಾದನು.

ಅದನ್ನು ಶಮನ ಮಾಡುವುದಕ್ಕಾಗಿ ಚೆನ್ನಾಗಿ ಕಿನ್ನರಿ ನುಡಿಸುವಂತ ಒಬ್ಬ ಯೌವನಸ್ಥನನ್ನು ಕರೆದುಕೊಂಡು ಬಂದರು, ಆತನು ಯಾರಾಗಿರಬಹುದೆಂದು ಉಹಿಸಬಹುದಾ? ಆತನು ದಾವೀದನು.



ದಾವೀದನು ನುಡಿಸುವಂತ ನಾದವನ್ನು ಕೇಳಿ ಸೌಲನ ಮನಸ್ಸು ಶಾಂತವಾಯಿತು. ಆದುದ್ದರಿಂದ ಸೌಲನು ಇಷಯನ ಮಗನಾದ ದಾವೀದನನ್ನು ತನ್ನ ಬಳಿಯಲ್ಲಿಯೇ ಇಟ್ಟುಕೊಳ್ಳಲು ಬಯಸಿದನು, ಕಾರಣವೇನೇಂದರೆ ಅಂತಹ ಪರಿಸ್ಥಿತಿ ಬಂದಾಗ ದಾವೀದನ ಕಿನ್ನರಿಯ ನಾದವನ್ನು ನುಡಿಸುತ್ತಿದ್ದನು ಇದರಿಂದ ಆತನಿಗೆ ಸಹಾಯುವಾಗುತ್ತಿತ್ತು.



ದಾವೀದನು ಸೌಲನನ್ನು ಬಿಟ್ಟು ಮನೆಗೆ ಹೋದನು, ಸೌಲನ ವಿರೋದವಾಗಿ ಫಿಲಿಷ್ಟಿಯರು ಯುದ್ಧಕ್ಕೆ ನಿಂತರು. ಸೌಲನ ಸೈನ್ಯದಲ್ಲಿದ್ದ ದಾವೀದನ ಸಹೋದರರು ಸಹ ಹೋದರು. ಅವರ ಯೋಗಕ್ಷಮವನ್ನು ವಿಚಾರಿಸಿ ಅವರಿಗೆ ಊಟವನ್ನು ಕೊಡಲು ಇಷಯನು ದಾವೀದನನ್ನು ಕಳಿಸಿದನು.



ಬಲಿಷ್ಠನಾದ ಗೋಲ್ಯಾತನು ಇಸ್ರೇಯೇಲರ ಸರ್ವ ಸೈನ್ಯವನ್ನು ಭಯಪಡಿಸಿದನು.



ಗೋಲ್ಯಾತನು ಇಸ್ರೆಯೇಲರರಿಗೆ ಹೇಳಿದ್ದೆನೆಂದರೆ, ನಿಮ್ಮಲ್ಲಿ ಒಬ್ಬನನ್ನು ಆರಿಸಿ ನನ್ನ ಬಳಿ ಯುದ್ಧಕ್ಕೆ ಕಳುಹಿಸಿರಿ ಆತನು ನನ್ನನ್ನು ಕೊಂದರೆ ನಾವೆಲ್ಲರು ನಿಮಗೆ ಅಧೀನವಾಗುತ್ತವೆ, ಅಥವಾ ನಾನು ಆತನನ್ನು



ಕೊಂದರೆ ನಿವೇಲ್ಲರು ನನಗೆ ಆಧೀನವಾಗಬೇಕು.

ಹೀಗೆ ಆತನು ಅವರಿಗೆ ಎದುರಾಗಿ ಸವಾಲು ಹಾಕುತ್ತಿದ್ದನು ಇದನ್ನು ಕೇಳಿ ಇಸ್ರೇಯೇಲರು ಭಯ ಪೀಡಿತರಾದರು.



ಇದನ್ನು ದಾವೀದನು ಕೇಳಿ ಸೌಲನಿಗೆ ಹೇಳಿದ್ದೆನೆಂದರೆ, ನಿಮ್ಮಲ್ಲಿ ಯಾರು ಸಹಾ ಆತನಿಗೆ ಹೆದರಬಾರದು ನಿನ್ನ ಸೇವಕನಾದ ನಾನು ಆತನ ಸಂಗಡ ಯುದ್ದಮಾಡುವೆನೆಂದು ಹೇಳಿದನು. ದಾವೀದನು ಸರ್ವಾಯುದವನ್ನು ಧರಿಸಿಕೊಳ್ಳಬೇಕೆಂದು ಸೌಲನು ಬಯಸಿದನು.



ಅದು ದಾವೀದನು ಸರಿಯಾಗಲಿಲ್ಲ ಆದುದ್ದರಿಂದ ಆತನು ಅದನ್ನು ತೆಗೆದು ನುಣುಪಾದ ೫ ಕಲ್ಲುಗಳನ್ನು ಆರಿಸಿಕೊಂಡು ಕವಣೆಯನ್ನು ತೆಗೆದುಕೊಂಡನು.



ದಾವೀದನು ಯಾವುದೇ ಆಯುದವನ್ನು ಧರಿಸಿಕೊಳ್ಳದಿರುವುದನ್ನು ನೋಡಿ ಗೋಲ್ಯಾತನು ನಗೆಯಾಡಿ ಹೇಳಿದ್ದೆನೆಂದರೆ, ಇವತ್ತು ನಿನ್ನನ್ನು ಕೊಂದು ಆಕಾಶದಲ್ಲಿ ಹಾರಾಡುವ ಪಕ್ಷಿಗಳಿಗೆ ಆಹಾರವನ್ನುಂಟುಮಾಡುತ್ತನೆ. ಎಂದು ಕೂಗಿದನು. ಆಗ ದಾವೀದನು, ನೀನು ನಿನ್ನ ಆಯುಧಗಳಿಂದ ಬರುತ್ತೀಯ ಆದರೆ ನಾನದರೂ ...



... ಯಹೋವ ಹೆಸರಿನಲ್ಲಿ ಬರುತ್ತೇನೆ. ಇವತ್ತು ನಿನ್ನನ್ನು ದೇವರು ನನ್ನ ಕೈಯಲ್ಲಿ ಒಪ್ಪಿಸಿಕೊಟ್ಟಿದ್ದಾನೆ ಎಂದು ಹೇಳಿದನು. ಯುದ್ಧವು ಯಹೋವನದಾಗಿದೆ ದಾವೀದನು ನೇರವಾಗಿ ಗೋಲ್ಯಾತನ ಎದುರಿಗೆ ಹೋಗಿ ತನ್ನಲ್ಲಿರುವ ಕಲ್ಲನ್ನು ತೆಗೆದುಕೊಂಡು ಕವಣೆಯಿಂದ ಆತನ ಹಣೆಗೆ ಹೊಡೆದನು ಗೋಲ್ಯಾತನು ಬಿದ್ದನು.



ಕೂಡಲೆ ದಾವೀದನು ಹೋಗಿ ಗೋಲ್ಯಾತನ ಕತ್ತಿಯನ್ನು ತೆಗೆದುಕೊಂಡು ಆತನ ತಲೆಯನ್ನು ಕತ್ತರಿಸಿದನು ಆಗ ಗೋಲ್ಯಾತನು ಸತ್ತನು. ಇದನ್ನು ನೋಡಿದ ಪಿಲಿಷ್ಟಿಯರು ಜೀವವನ್ನು ಉಳಿಸಿಕೊಳ್ಳಲು ಓಡಿದರು.





ರಾಜನಾದ ಸೌಲನಿಗೆ ಕಿನ್ನರಿ
ನುಡಿಸುವಂತ ಹುಡುಗನು
ದಾವೀದನೆಂದು ತಿಳಿದಿರಲಿಲ್ಲ.
ಆತನನ್ನು ಸೈನ್ಯವನ್ನು
ನೋಡಿಕೊಳ್ಳುವಂತ
ಆಧಿಕಾರವನ್ನು
ಕೊಟ್ಟನು, ...





... ಆದರೆ ಜನರು ಇತನು ಮಾಡಿದ ಜಯದ ಕಾರ್ಯವನ್ನು ಕುರಿತು ಹೋಗುಳುವಾಗ ಸೌಲನಿಗೆ ಎಲ್ಲಿ ನನ್ನ ರಾಜ್ಯವು ನನ್ನನ್ನು ಕೈಬಿಟ್ಟು ಹೋಗುತ್ತದೆ ಎಂದು ದಾವೀದ ಮೇಲೆ ಕಣ್ಣಿಟ್ಟನು.



ಮತ್ತೊಮ್ಮೆ ಸೌಲನು ಪೇಚಾಟಕ್ಕೆ ಒಳಗಾದನು, ಆಗ ದಾವೀದನು ನುಡಿಸುವಂತ ಕಿನ್ನರಿ ನಾದವನ್ನು ಕೇಳಿ ಸೌಲನ ಮನಸ್ಸು ಶಾಂತವಾಯಿತು, ...



... ಆಗ ಸೌಲನು ದಾವೀದನ್ನು ಕೊಲ್ಲಲು ಮೂರು ಸಾರಿ ಈಟಿಯನ್ನು ಎಸೆದನು ಆದರೆ ದಾವೀದನು ತಪ್ಪಿಸಿಕೊಂಡನು.



ದೇವರು ದಾವೀದನ ಸಂಗಡ ಇದ್ದನೆಂದು ಆಗ ಆತನಿಗೆ ಅರಿವಾಯಿತು ಮತ್ತು ಆತನಿಗೆ ಭಯವಾಗಿ ಸೌಲನನ್ನು ಬಿಟ್ಟು ಹೋದನು.



ಸೌಲನ ಮಗನಾದ ಯೋನಾತನನು

ದಾವೀದನನ್ನು ತನ್ನ ಸಹೋದರನಂತೆ

ಪ್ರೀತಿಸುತ್ತಿದ್ದನು, ಸೌಲನು ಆತನನ್ನು

ಕೊಂದುಹಾಕಲು ಹೊಂಚು

ಹಾಕುತ್ತಿದ್ದನೆಂದು ಯೋನಾತನನು

ದಾವೀದನಿಗೆ

ತಿಳಿಸಿದನು, ...



... ಆತನು ಮಲಗುವ ಹಾಸಿಗೆಯಲ್ಲಿ ದಾವೀದನಂತೆ ಒಂದು ಆಕಾರವನ್ನು ಮಾಡಿ ಮಲಗಿಸಿದನು ಆದರೆ ದಾವೀದನು ಮಧ್ಯರಾತ್ರಿಯಲ್ಲಿಯೇ ಕಿಡಕಿಯಿಂದ ಕೆಳಗಿಳಿದು ಹೊರಟು ಹೋದನು.

ಆಗ ಸೌಲನ ಸೈನಿಕರು ಮುಂಜಾನೆ ಬಂದು ನೋಡಲು ದಾವೀದನು

ಅಲ್ಲಿ ಇರಲ್ಲಿಲ್ಲಾ.



ದಾವೀದನು ಸೌಲನನ್ನು ಬಿಟ್ಟು ದೂರ ಹೋಗುವ ಮೊದಲು ದಾವೀದನು ಮತ್ತು ಯೋನಾತನನು ಒಬ್ಬರಿಗೊಬ್ಬರು ಸಹಾಯ ಮಾಡುವೆವೆಂದು ಒಡಂಡಿಕೆಯನ್ನು ಮಾಡಿಕೊಂಡರು.



ಅವರಿಬ್ಬರು ದೂರವಾದರು. ದಾವೀದನು ಸೌಲನ ಸೈನಿಕರಿಗೆ ತಿಳಿಯದೆ ಇರುವಂತ ಸುರಕ್ಷಿತವಾದ ಒಂದು ಸ್ಥಳವನ್ನು ಆರಿಸಿಕೊಂಡು ಅಲ್ಲಿ ವಾಸಿಸಿದನು.



ದಾವೀದನು ಕುರಿ ಕಾಯುವ ಹುಡುಗನಾಗಿದ್ದನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**1 ಸಮುವೇಲು 16:20**

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
**ಕೀರ್ತನೆ 119:130**

ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು
ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16